# ‘ಬಿಸಗೋಡ ಹೋರಾಟದ ಹೆಜ್ಜೆಗಳು ಮಾದರಿ’

ಪ್ರಜಾವಾಣಿ ವಾರ್ತೆ

ಯಲ್ಲಾಪುರ: ‘ಅಂದಿನ ಗಣಿಗಾರಿಕೆಯಿಂದ ಪರಿಸರದ ಮೇಲೆ ಒತ್ತಡ ಬೀಳುತ್ತಿರುವ ಸಂದರ್ಭದಲ್ಲಿ ನಡೆದ ಬಿಸಗೋಡ ಗಣಿ ವಿರೋಧಿ ಹೋರಾಟದ ಹೆಜ್ಜೆಗಳು ಇಂದಿನ ಪರಿಸರ ಹೋರಾಟಗಾರರಿಗೆ ಮಾದರಿಯಾಗಿದೆ’ ಎಂದು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಡಾ.ವಾಮನ ಆಚಾರ್ ಹೇಳಿದರು.

ಗ್ರಾಮ ಅರಣ್ಯಸಮಿತಿ, ವೃಕ್ಷಲಕ್ಷ ಆಂದೋಲನದ ಆಶ್ರಯದಲ್ಲಿ ‘ಬಿಸಗೋಡ ಗಣಿ ಪ್ರದೇಶದ ಪುನಶ್ಚೇತನ, ಬಿಸಗೋಡ ಪರಿಸ್ಥಿತಿ’ ಕುರಿತು ಬಿಸಗೋಡಿನ ಚಕ್ರಬೈಲನಲ್ಲಿ ಸೋಮವಾರ ಏರ್ಪಡಿಸಿದ್ದ ರಾಜ್ಯಮಟ್ಟದ ಅಧ್ಯಯನ ಶಿಬಿರವನ್ನು ವೃಕ್ಷಪೂಜೆ ಮಾಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ‘ಬಿಸಗೋಡ ಗಣಿಗಾರಿಕೆಯಿಂದ ಅರಣ್ಯಭೂಮಿಗೆ ವ್ಯಾಪಕವಾಗಿ ಹಾನಿ ಉಂಟಾಗಿತ್ತು. ಸಾಂಪ್ರದಾಯಿಕ ನೀರಿನ ಹರಿವಿಗೆ ತಡೆಯುಂಟಾಗಿತ್ತು. ಇಂತಹ ಸಂದರ್ಭದಲ್ಲಿ ಸ್ಥಳೀಯರು ಜಾಗೃತಿಗೊಂಡು ಹೋರಾಟ ಮಾಡಿ ಗಣಿಗಾರಿಕೆ ಸ್ಥಗಿತಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಗಣಿಗಾರಿಕೆ ನಿಂತ ಮೇಲೆ ವನೀಕರಣದ ಮೂಲಕ ಅರಣ್ಯ ಪುನರುತ್ಪತ್ತಿ ಮಾಡಿರುವ ಕಾರ್ಯ ಶ್ಲಾಘನೀಯ’ ಎಂದರು.

ಬೆಂಗಳೂರಿನ ಭಾರತೀಯ ವಿಜ್ಞಾನ ಭವನದ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ ಮಾತನಾಡಿ, ‘ಸಣ್ಣ ಸೂರು ಕಟ್ಟಿಕೊಳ್ಳಲು ಉಂಟಾಗುವ ನೂರೆಂಟು ತಾಪತ್ರಯ ಗಣಿಗಾರಿಕೆ, ಭೂಕಬಳಿಕೆಗೆ ಯಾಕಿಲ್ಲ?. ಗಣಿಗಾರಿಕೆ ನಡೆಸುವವರ ವಿರುದ್ಧ ಯಾವುದೇ ಕ್ರಮ ಆಗುತ್ತಿಲ್ಲ’ ಎಂದು ವಿಷಾದಿಸಿದರು.



ಯಲ್ಲಾಪುರ ತಾಲ್ಲೂಕಿನ ಬಿಸಗೋಡಿನ ಚಕ್ರಬೈಲನಲ್ಲಿ ‘ಬಿಸಗೋಡ ಗಣಿ ಪ್ರದೇಶದ ಪುನಶ್ಚೇತನ, ಬಿಸಗೋಡ ಪರಿಸ್ಥಿತಿ’ ಕುರಿತು ಸೋಮವಾರ ಏರ್ಪಡಿಸಿದ್ದ ರಾಜ್ಯಮಟ್ಟದ ಅಧ್ಯಯನ ಶಿಬಿರದ ಸಂದರ್ಭದಲ್ಲಿ ವಿಜ್ಞಾನಿಗಳ ತಂಡ ಗಣಿಗಾರಿಕೆ ನಡೆಸಿದ ಪ್ರದೇಶಗಳ ಪರಿಶೀಲನೆ ನಡೆಸಿತು.

‘ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಉತ್ಪನ್ನಗಳು ಸರ್ಕಾರದ ಬೊಕ್ಕಸಕ್ಕೆ ದೊಡ್ಡ ಆದಾಯ ನೀಡುತ್ತಿದೆ. ಆದರೆ ಸ್ಥಳೀಯ ಸಂಪನ್ಮೂಲ ಪ್ರದೇಶದ ಅಭಿವೃದ್ಧಿಗೆ ದೊರೆಯುತ್ತಿಲ್ಲ. ಈ ಬಗ್ಗೆ ಸರ್ಕಾರ ಶ್ವೇತ ಪತ್ರ ಮಂಡಿಸಬೇಕು’ ಎಂದು ಆಗ್ರಹಿಸಿದರು.

‘ಪಶ್ಚಿಮ ಘಟ್ಟ ಪ್ರದೇಶದ ಪರಿಸರ, ನೀರು ಶುದ್ಧವಾಗಿದ್ದು, ಇದನ್ನು ಕಾಯ್ದುಕೊಂಡು ಕಾಡು ಪುನಶ್ಚೇತನಗೊಳಿಸುವಂತೆ ನೋಡಿಕೊಳ್ಳಬೇಕು. ಅರಣ್ಯಗಳ ಅಭಿವೃದ್ಧಿಗೆ ಸರ್ಕಾರದ ಯಾವ ಯೋಜನೆಗಳ ಅಗತ್ಯವಿಲ್ಲ. ಇರುವ ಅರಣ್ಯದ ಮೇಲೆ ಯಾವುದೇ ದಾಳಿ ಆಗದಂತೆ ಕ್ರಮ ವಹಿಸಿದರೆ ಸಾಕು ಕಾಡು ತನ್ನಷ್ಟಕ್ಕೆ ತಾನೇ ಬೆಳೆಯುತ್ತದೆ’ ಎಂದರು.

ಪರಿಸರ ವಿಜ್ಞಾನಿ ಡಾ. ಸುಭಾಷ್‌ಚಂದ್ರ ಮಾತನಾಡಿ, ‘ಇಲ್ಲಿನ ಕಾಡು, ಪರಿಸರ , ಸಂಸ್ಕೃತಿ, ತೋಟಗಾರಿಕೆಯನ್ನು ಅಧ್ಯಯನ ನಡೆಸುವಂಥ, ಪರಿಸರ ಜಾಗೃತಿ ಮೂಡಿಸುವಂತಹ ಪರಿಸರ ಪೂರಕವಾದ ಪ್ರವಾಸೋದ್ಯಮಕ್ಕೆ ಒತ್ತು ನೀಡಿ ಉದ್ಯೋಗ ಸೃಷ್ಟಿಗೆ ಅವಕಾಶ ಕಲ್ಪಿಸಬೇಕಿದೆ. ಪರಿಸರ ಹಾನಿ ಮಾಡದ ಸಿದ್ಧ ಉಡುಪು ನಿರ್ಮಾಣದಂತಹ ಕೈಗಾರಿಕೆಗಳ ಸ್ಥಾಪನೆಗೆ ಒತ್ತು ನೀಡಬೇಕಿದೆ’ ಎಂದರು.

ವೃಕ್ಷಲಕ್ಷ ಆಂದೋಲನದ ಅನಂತ ಹೆಗಡೆ ಅಶೀಸರ ಅಧ್ಯಕ್ಷತೆ ವಹಿಸಿ, ‘ಜಿಲ್ಲೆಯಲ್ಲಿ ಮಿನಿಡ್ಯಾಂ ಪ್ರಸ್ತಾಪ ಪದೇ ಪದೇ ಬರುತ್ತಿದೆ. ಹಿಂದಿನ ಬಾಗಿಲಿನಿಂದ ಯೋಜನೆ ಬರದಂತೆ ಜಾಗೃತಿ ವಹಿಸಬೇಕು’ ಎಂದರು.

ಇದೇ ಸಂದರ್ಭದಲ್ಲಿ ಬಿಸಗೋಡ ಪ್ರೌಢಶಾಲೆಯ ಸಮೃದ್ಧಿ ಇಕೋ ಕ್ಲಬ್ ವತಿಯಿಂದ ಶಿಕ್ಷಕರಾದ ಸದಾನಂದ ದಬಗಾರ, ಸತೀಶ ಹೆಗಡೆ ಮಾರ್ಗದರ್ಶನದಲ್ಲಿ ಗಣಿಗಾರಿಕೆ ಕುರಿತು ವಿದ್ಯಾರ್ಥಿಗಳು ನಡೆಸಿದ ಅಧ್ಯಯನ ವರದಿಯನ್ನು ಬಿಡುಗಡೆಗೊಳಿಸಲಾಯಿತು. ಇದರ ಕುರಿತು ಶಿಬಿರದಲ್ಲಿ ಮಾಹಿತಿ ನೀಡಿದರು.

ಪ್ರೊ.ಬಿ.ಎಂ.ಕುಮಾರಸ್ವಾಮಿ, ವನ್ಯಜೀವಿ ತಜ್ಞ ಬಾಲಚಂದ್ರ ಸಾಯಿಮನೆ, ಶಿರಸಿ ಅರಣ್ಯ ಕಾಲೇಜಿನ ಉಪನ್ಯಾಸಕ ಶ್ರೀಧರ ಭಟ್ಟ, ಸ್ನೇಹಕುಂಜ ಸಂಸ್ಥೆಯ ಎಂ.ಆರ್.ಹೆಗಡೆ, ಆನಗೋಡ ಗ್ರಾಮ ಪಂಚಾಯ್ತಿ ಅಧ್ಯಕ್ಷ ಲಕ್ಷ್ಮಣ ಮಳಿಕ, ಸದಸ್ಯ ಕೆ.ಟಿ.ಹೆಗಡೆ, ಡಿಎಫ್ಒ ಬಿ.ವೆಂಕಟೇಶ, ಆರ್‌ಎಫ್‌ಒ ಪಿ.ಎಸ್.ವರೂರ, ಪಶ್ಚಿಮ ಘಟ್ಟ ಕಾರ್ಯಪಡೆಯ ಮಾಜಿ ಸದಸ್ಯ ಶಾಂತಾರಾಮ ಸಿದ್ದಿ, ಬಿಸಗೋಡ ಗಣಿ ವಿರೋಧಿ ಹೋರಾಟ ಸಮಿತಿಯ ಅಧ್ಯಕ್ಷ ವಿ.ಎಸ್.ಭಟ್ಟ ಕಾರೆಮನೆ, ಕಾರ್ಯದರ್ಶಿ ಕೆ.ಎಸ್.ಭಟ್ಟ ಆನಗೋಡ, ಸಂಚಾಲಕ ರಾಜಶೇಖರ್ ಧೂಳಿ, ಸ್ಥಳೀಯರಾದ ಆರ್.ಜಿ.ಭಟ್ಟ ಮೇಗಿನಮನೆ, ನಾಗೇಂದ್ರ ಹೊಸ್ಮನೆ, ಡಾ.ರವಿ ಭಟ್ಟ ಬರಗದ್ದೆ, ಬಿ.ಜಿ.ಹೆಗಡೆ ಗೇರಾಳ, ಚನ್ನಪ್ಪ ಗೌಡ, ವಿ.ಎಸ್.ಭಟ್ಟ ಕಾರೆಮನೆ ಮುಂತಾದವರು ಉಪಸ್ಥಿತರಿದ್ದರು.